**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**ಅಪರಾಧ ಪ್ರಕರಣ ಸಂಖ್ಯೆಃ 665/2019**

| | | |
|---|---|---|
| **ಹೆಸರು** | ಜಯಮ್ಮ | ಚಾಸಾ-1 |
| **ಗಂಡನ ಹೆಸರು** | ಈರಯ್ಯ | |
| **ಉದ್ಯೋಗ** | ಕೂಲಿ ಕೆಲಸ | ಪ್ರಾಸಾ-1 |
| **ವಾಸ ಸ್ಥಳ** | ಮುತ್ತಿಗೆ ಗ್ರಾಮ | |
| **ದಿನಾಂಕಃ 10.10.2024**ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ</u>**

ಆರೋಪಿಗಳ ಪರಿಚಯ ನನಗೆ ಇರುತ್ತದೆ. 30 ವರ್ಷಗಳ ಹಿಂದೆ ನನ್ನ ಗಂಡ ಅರ್ಧ ಎಂದರೆ ಜಮೀನು ಮತ್ತು ಆರೋಪಿಗಳು 1 ಎಕರೆ ಜಮೀನನ್ನು 1ನೇ ಆರೋಪಿಯ ಸಹೋದರನಿಂದ ಖರೀದಿಸಿರುತ್ತೇವೆ. ನನ್ನ ಗಂಡ ತೀರಿಕೊಂಡ ನಂತರ ಆರೋಪಿಗಳು ನಾವು ಖರೀದಿಸಿದ ಜಮೀನನ್ನು ಸಹ ಅವರೇ ಉಳುಮೆ ಮಾಡುತ್ತಿದ್ದರು. ಆರೋಪಿಗಳು ನಮ್ಮ ಜಮೀನನ್ನು ಉಳುಮೆ ಮಾಡುವ ಸಮಯದಲ್ಲಿ ಅವರನ್ನು ನಮ್ಮ ಜಮೀನಿನಲ್ಲಿ ಏಕೆ ಉಳುಮೆ ಮಾಡುತ್ತಿರುತ್ತೀರಿ ಎಂದು ಪ್ರಶ್ನಿಸಿದಾಗ ಆರೋಪಿಗಳು ನನ್ನ ಎದೆಯ ಮೇಲೆ ಕುಳಿತು 1ನೇ ಅರೋಪಿಯು ನನಗೆ ಕಲ್ಲಿನಿಂದ ಹಲ್ಲಿಗೆ ಹೊಡೆದಿರುತ್ತಾರೆ. ಆಗ ನನ್ನ ಎರಡೂ ಹಲ್ಲು ಉದುರಿರುತ್ತವೆ ಮತ್ತು ಇನ್ನೂ 2 ಹಲ್ಲುಗಳು ಅಲ್ಲಾಡುತ್ತಿರುತ್ತವೆ. ನಂತರ ಚಾಸಾ 2 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತಾರೆ. ನಂತರ ನನ್ನನ್ನು ಸಂಜೆ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ವಿಚಾರವಾಗಿ ನಾನು ಹೇಳಿಕೆಯನ್ನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

1) ದಿನಾಂಕ 20.05.2018 ರಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ಹೇಳಿಕೆಯನ್ನು **ನಿಪಿ 1** ಎಂದು ಮತ್ತು ಸಾಕ್ಷಿಯ ಸಹಿಯನ್ನು **ನಿಪಿ 1(ಎ)** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಸಾಕ್ಷಿಗೆ ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವುದರಿಂದ ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕ ರವರಿಂದ.**

ದಿನಾಂಕ 20.05.2018 ರಂದು ಆರೋಪಿಗಳು ನನಗೆ ಸೇರಿದ 20 ಗುಂಟೆ ಜಮೀನನ್ನು ಉಳುಮೆ ಮಾಡುತ್ತಿದ್ದು ನಾನು ಅವರನ್ನು ನಮ್ಮ ಜಮೀನಿನಲ್ಲಿ ಏಕೆ ಉಳುಮೆ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದಾಗ ಆರೋಪಿಗಳು ನನಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. 1ನೇ ಆರೋಪಿಯು ನನ್ನನ್ನು ಬಿಡುವುಲ್ಲ ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿ ನನ್ನ ಕುತ್ತಿಗೆಯನ್ನು ಹಿಚುಕಿದರು ಎಂದರೆ ಸರಿ. ಆಗ ಅಲ್ಲಿಯೇ ಹೋಗುತ್ತಿದ್ದ ಶಿವಪ್ಪನ ಮಗ ಲಿಂಗರಾಜುರವರು ಜಗಳವನ್ನು ಬಿಡಿಸಿದರು ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಸಿ.ಆರ್ ವಕೀಲರಿಂದಃ**

ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ನಿಂಗರಾಜು ಮತ್ತು ಊರಿನ ಬೇರೆ ಎಲ್ಲಾ ಮನೆಗಳಲ್ಲಿಯೂ ಕೂಲಿ ಕೆಲಸ ಮಾಡುತ್ತೇನೆ. ಮಂಜೇಗೌಡ ಎಂಬುವರ ಮನೆಯಲ್ಲಿಯೂ ಸಹ ಕೂಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಮಹೇಶ ಎಂಬುವರು ನನ್ನ ಅಣ್ಣನ ಮಗ. ಮಂಜೇಗೌಡ ಮತ್ತು ನಿಂಗರಾಜು ಎಂಬುವರ ಮನೆಯಲ್ಲಿ ಕೆಲಸ ಮಾಡುತ್ತಿದ್ದು ನಾನು ಅವರಿಂದ ಆಗಾಗ ಹಣವನ್ನು ಪಡೆದುಕೊಳ್ಳುತ್ತಿರುತ್ತೇನೆ ಎಂದರೆ ಸಾಕ್ಷಿಯು ನಾನು ಅವರ ಮನೆಯಲ್ಲಿಯೂ ಹಣ ಪಡೆಯುತ್ತೇನೆ, ನಾನು ಕೂಲಿ ಕೆಲಸ ಮಾಡುವ ಬೇರೆಯವರ ಮನೆಯಲ್ಲೂ ಹಣ ಪಡೆಯುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಂಗರಾಜು ಮತ್ತು ಮಂಜೇಗೌಡರವರು ನನಗೆ ಏನಾದರೂ ಕಷ್ಟವಾದರೆ ಸಾಮಾನ್ಯವಾಗಿ ಸಹಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಈರಯ್ಯ ಮತ್ತು 1ನೇ ಆರೋಪಿಯು ಬೊಮ್ಮಯ್ಯ ಎಂಬುವರಿಂದ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ. ನನ್ನ ಹೆಸರಿನಲ್ಲಿ ಸದರಿ ಹೆಸರಿನ ಪಹಣಿ ಇರುವುದಿಲ್ಲ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ತಿಳಿದಿರುವುದಿಲ್ಲ ನನ್ನ ಗಂಡನಿಗೆ ತಿಳಿದಿರುತ್ತದೆ. ನಾವು ಅರ್ಧ ಎಕರೆ ಜಮೀನನ್ನು ಖರೀದಿಸಿರುತ್ತೇನೆ. ಮೂರು ಸಾವಿರ ರೂ. ಹಣವನ್ನು ನಾವು 1ನೇ ಆರೋಪಿಗೆ ನೀಡಿರುತ್ತೇನೆ. ಸದರಿ ಹಣವನ್ನು ನಾನು ಅಣ್ಣಯ್ಯನಿಗೆ ನೀಡಿರುತ್ತೇನೆ ಎಂದು ದೂರಿನಲ್ಲಿ ಬರೆದಿರುತ್ತಾರೆ. ಸದರಿ ಜಮೀನನ್ನು 1ನೇ ಆರೋಪಿಯ ಹೆಸರಿಗೆ ನೋಂದಣಿ ಮಾಡಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದೂರಿನಲ್ಲಿ ನಾನು ಜಮೀನನ್ನು ಪಡೆದುಕೊಂಡು 1ನೇ ಆರೋಪಿಯ ಹೆಸರಿಗೆ ನೋಂದಣಿ ಮಾಡಿಸಿರುತ್ತೇನೆ ಎಂದು ಹೇಳಿರುವುದಿಲ್ಲ. ಸದರಿ ನೋಂದಾಯಿತ ಕ್ರಯಪತ್ರದಲ್ಲಿ 40 ಗುಂಟೆ ಆರೋಪಿಗಳಿಗೆ ಮತ್ತು 20 ಗುಂಟೆ ನಮಗೆ ಬರಬೇಕೆಂದು ಬರೆಸಿರುತ್ತೇವೆ. ಆರೋಪಿಗಳು ನಮ್ಮ ಜಮೀನನ್ನು ಉಳುಮೆ ಮಾಡುತ್ತಿರುತ್ತಾರೆ ಎಂದು ನಾನು ದೂರಿನಲ್ಲಿ ಬರೆಸಿರುವುದಿಲ್ಲ. ಸುಮಾರು 3 – 4 ವರ್ಷಗಳ ಹಿಂದೆ ಆರೋಪಿಗಳು 20 ಗುಂಟೆ ಜಮೀನನ್ನು ಅವರಿಗೆ ಮಾಡಿಸಿಕೊಂಡಿರುವ ವಿಚಾರ ತಿಳಿದಿರುತ್ತದೆ. ಆರೋಪಿಗಳು ಅವರ ಜಮೀನಿನಲ್ಲಿ ಉಳುಮೆ ಮಾಡುತ್ತಿರುವ ಸಮಯದಲ್ಲಿ ನೀವು ತಕರಾರು ಮಾಡಿರುತ್ತೀರಾ ಎಂರದೆ ಸಾಕ್ಷಿಯ ಆರೋಪಿಗಳು ನನ್ನ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾಗ ನಾನು ಆರೋಪಿಗಳಿಗೆ ತಕರಾರು

ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗಳ ಜಮೀನಿನಲ್ಲಿ ಆರೋಪಿಗಳು ಉಳುಮೆ ಮಾಡುತ್ತಿರುವ ಸಮಯದಲ್ಲಿ ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಖರೀದಿಸಿರುವ ಜಮೀನಿನ ಸರ್ವೆ ನಂಬರ್ ನನಗೆ ತಿಳಿದಿರುವುದಿಲ್ಲ, ನನ್ನ ಗಂಡನಿಗೆ ತಿಳಿದಿರುತ್ತದೆ.

ಆರೋಪಿಗಳು ಉಳುಮೆ ಮಾಡುವ ಸಮಯದಲ್ಲಿ ನನಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಕಳೆದ 1 ವರ್ಷಗಳಿಂದ ನಾನು ಎಲೆ ಅಡಿಕೆ ಹಾಕುತ್ತಿರುತ್ತೇನೆ. ನಾನು 40 - 45 ವರ್ಷಗಳಿಂದ ಹೊಗೆಸೊಪ್ಪನ್ನು ತಿನ್ನುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೊಗೆಸೊಪ್ಪು ಮತ್ತು ಕಡ್ಡಿಪುಡಿ ತಿನ್ನುವುದರಿಂದ ನನ್ನ ಹಲ್ಲುಗಳು ಉದುರಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಕಲ್ಲಿನಿಂದ ಹೊಡೆದು ಹಲ್ಲನ್ನು ಉದುರಿಸಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆಯಾಗಿದೆ ಎಂದು ಹೇಳುತ್ತಿರುವ ಸಮಯದಲ್ಲಿ ಬೇರೆ ಯಾರು ಇರುವುದಿಲ್ಲ. ನಿಂಗರಾಜು ರವರು ಗಲಾಟೆಯಾಗುವ ಸಮಯದಲ್ಲಿ ಕೇಳಿಸಿಕೊಂಡು ಬಂದರು. ರಸ್ತೆಯಿಂದ ಜಮೀನು ಎಷ್ಟು ಅಂತರದಲ್ಲಿರುತ್ತದೆ ಎಂದು ಹೇಳಲು ಬರುವುದಿಲ್ಲ. ನಿಂಗರಾಜು ಜಗಳವನ್ನು ಬಿಡಿಸಿರುವುದಿಲ್ಲ ಮತ್ತು ನನ್ನನ್ನು ಆಸ್ಪತ್ರೆಗೆ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ವಿರುದ್ದ ಒಂದು ವ್ಯಾಜ್ಯವನ್ನು ಹಾಕಿರುತ್ತಾರೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ನಾನು ವಕೀಲರ ಮುಖಾಂತರ ವ್ಯಾಜ್ಯವನ್ನು ನಡೆಸುತ್ತಿರುತ್ತೇನೆ ಎಂದರೆ ಸರಿ. 2015 ರನೇ ಇಸವಿಯಿಂದ ನಾನು ಆರೋಪಿಗಳ ಜಮೀನಿನ ಸ್ವಾದೀನಕ್ಕೆ ತಂಟೆ ತಕರಾರು ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳನ್ನು ರಾಜಿ ಮಾಡಿಕೊಳ್ಳಲು ಹಲವಾರು ಬಾರಿ ನಾನು ಕೇಳಿರುತ್ತೇನೆ ಎಂದರೆ ಸಾಕ್ಷಿಯ ನಮಗೆ ಕ್ರಯಪತ್ರ ಬರೆದುಕೊಡಲು ಪಂಚಾಯಿತಿಯಲ್ಲಿ ಕೇಳಿರುತ್ತೇನೆ ಆದರೆ ರಾಜಿ ಮಾಡಿಕೊಳ್ಳಲು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ನಮಗೆ ಕ್ರಯಪತ್ರವನ್ನು ಬರೆದುಕೊಡುವುದಿಲ್ಲ ಎಂದು ಹೇಳಿದಾಗ ನಾನು ಆರೋಪಿಗಳ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳ ಸ್ವಾದೀನಕ್ಕೆ ನಾನು ತಕರಾರು ಮಾಡಿದ್ದರಿಂದ ಆರೋಪಿಗಳು ನನ್ನ ವಿರುದ್ದ ಒಂದು ಕ್ರಿಮಿನಲ್ ಮೊಕದಮ್ಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಆರೋಪಿಗಳು ನಮ್ಮ ವಿರುದ್ದ ಪ್ರಕರಣವನ್ನು ದಾಖಲಿಸಿರುವುದರಿಂದ 2 ದಿನಗಳ ನಂತರ ನಾನು ಆರೋಪಿಗಳ ವಿರುದ್ದ ಈ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಎದೆ ಮೇಲೆ ಕುಳಿತಿರುವುದಿಲ್ಲ ನನ್ನ ಕತ್ತನ್ನು ಹಿಸುಕಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಹೊಡೆದ ದಿನವೇ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಅರಕಲಗೂಡು ಮತ್ತು ಹಾಸನ ಎರಡೂ ಕಡೆಯೂ ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ. ಪೊಲೀಸರು ಬರೆದಿರುವ ಹೇಳಿಕೆಯಲ್ಲಿ ಅವರು ಏನನ್ನು ಬರೆದಿರುತ್ತಾರೆ ಎಂಬುದರ ಮಾಹಿತಿ ನನಗೆ ಇರುವುದಿಲ್ಲ. ಜಮೀನನ್ನು ಆರೋಪಿಗಳಿಂದ ಬಿಡಿಸಿಕೊಳ್ಳುವ ಉದ್ದೇಶದಿಂದ ನಾನು ಆರೋಪಿಗಳ ವಿರುದ್ದ ಸುಳ್ಳು ಪ್ರಕರಣ ದಾಖಲಿಲಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯಾಗಿದೆ ಎಂದು ಹೇಳುತ್ತಿರುವ ದಿನದ ನಂತರ ಪೊಲೀಸರು ನಿಮ್ಮನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು 1 ವಾರಗಳ

ನಂತರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿಕೊಂಡಿರುತ್ತಾರೆ ಮತ್ತು ವಿಚಾರಣೆಯನ್ನು ಮಾಡಿರುತ್ತಾರೆ. ಪೊಲೀಸರು ಯಾವುದೇ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಕಲ್ಲಿನಿಂದ ಹೊಡೆದಿರುವುದಿಲ್ಲ ಮತ್ತು ನನ್ನ ಹಲ್ಲನ್ನು ಉದುಸಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು,**
**ಅರಕಲಗೂಡು.**